# ರಾಮಕೃಷ್ಣ ಮಿಷನ್ ಆಶ್ರಮ

ಲಾಟು ಮಹಾರಾಜ್ ಪಥ್, ಛಾಪ್ರಾ 841 301, ಬಿಹಾರ್
ಫೋನ್: 06152-220739; ಇ-ಮೈಲ್: rkmchapra@rediffmail.com

ದೇವಸ್ಥಾನಕ್ಕೆ ಹೋಗಿ ದೇವರನ್ನು ಆರಾಧಿಸಿ. ನೀವು ಅಲ್ಲಿ ಗಳಿಸಿದ್ದನ್ನು ನಿಮ್ಮ ದೈನಂದಿನ ಜೀವನದಲ್ಲಿ ಅನುಷ್ಠಾನಕ್ಕೆ ತನ್ನಿರಿ. ದೇವಮಂದಿರಗಳಲ್ಲಿ ಭಗವಂತನನ್ನು ಪೂಜಿಸುವುದು ಮತ್ತು ಸಮಾಜದಲ್ಲಿ ಜನರ ಸೇವೆ ಮಾಡುವುದು - ಇವೆರಡೂ ಬೇರೆಬೇರೆಯಲ್ಲ. ನಾವು ಇದನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಈ ಮಹಾನ್ ಉಪದೇಶವನ್ನು ಇಂದು ಆಚರಣೆಗೆ ತರಬೇಕು. - ಸ್ವಾಮಿ ರಂಗನಾಥಾನಂದ

## ಒಂದು ಮನವಿ

ಬಿಹಾರದ ಛಾಪ್ರಾ ನಗರದಲ್ಲಿರುವ ರಾಮಕೃಷ್ಣ ಮಿಷನ್ ಆಶ್ರಮವು 2003 ನೇ ಇಸವಿಯ ರಾಮನವಮಿಯ ದಿನದಂದು ಆರಂಭವಾಯಿತು. ಈ ಪ್ರದೇಶವು ರಾಮಾಯಣ ಕಾಲದಿಂದಲೂ ಪ್ರಸಿದ್ಧವಾಗಿದೆ. ಶ್ರೀರಾಮಕೃಷ್ಣರ ಪ್ರತ್ಯಕ್ಷಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ಅದ್ಭುತಾನಂದಜಿ ಮಹಾರಾಜ್ (ಲಾಟು ಮಹಾರಾಜ್) ಅವರು ಜನಿಸಿದ ಪುಣ್ಯಕ್ಷೇತ್ರ ಇದು. ಲಾಟು ಮಹಾರಾಜ್ ನಿರಕ್ಷರಸ್ಥರಾಗಿದ್ದರು ಹಾಗೂ ಅನಾಥರಾಗಿದ್ದರು. ಅವರು ಶ್ರೀರಾಮಕೃಷ್ಣರ ಪ್ರಭಾವಕ್ಕೆ ಬಂದು, ತಮ್ಮ ಬಾಳನ್ನು ಭಗವಂತನಿಗೆ ಅರ್ಪಿಸಿಕೊಂಡು, ಮಹಾನ್ ಸಾಧಕರಾದರು. ಹಾಗೆಂದೇ ಸ್ವಾಮಿ ವಿವೇಕಾನಂದರು ಇವರನ್ನು 'ಶ್ರೀರಾಮಕೃಷ್ಣರ ಅದ್ಭುತ' ಎಂದು ಹೊಗಳಿದ್ದಾರೆ.

ಬಹಳಕಾಲದವರೆಗೂ ಲಾಟು ಮಹಾರಾಜರ ಜನ್ಮಸ್ಥಳದ ಬಗ್ಗೆ ಹೆಚ್ಚು ಗೊತ್ತಿರಲಿಲ್ಲ. 1983 ರಲ್ಲಿ ಬೇಲೂರು ಮಠದ ಒಬ್ಬರು ಸ್ವಾಮಿಗಳು ಛಾಪ್ರಾಗೆ ಭೇಟಿಕೊಟ್ಟರು. ಆಶ್ಚರ್ಯವೋ ಎಂಬಂತೆ, ಕೆಲವು ಭಕ್ತರು ಅಲ್ಲಿ ನಿಯಮಿತವಾಗಿ ವೇದಾಂತ ಅಧ್ಯಯನ ಕೇಂದ್ರವೊಂದನ್ನು ನಡೆಸುತ್ತಿದ್ದುದನ್ನು ಕಂಡರು. ಆ ಭಕ್ತರು ರಾಮಕೃಷ್ಣ ಮಿಷನ್‌ನ ಕೇಂದ್ರ ಅಲ್ಲಿ ಸ್ಥಾಪನೆಯಾಗಬೇಕೆಂಬ ತಮ್ಮ ಇಚ್ಛೆಯನ್ನು ಸ್ವಾಮಿ ರಂಗನಾಥಾನಂದಜಿ ಅವರಿಗೆ ತಿಳಿಸಿದರು. ಅವರು, ಸ್ವಾಮಿ ಅದ್ಭುತಾನಂದರ ಜನ್ಮಸ್ಥಾನದಲ್ಲಿ ಆಶ್ರಮ ಸ್ಥಾಪನೆ ಆಗುವ ಸಾಧ್ಯತೆಯನ್ನು ತಿಳಿದು ಬಹಳ ಸಂತೋಷಪಟ್ಟರು. ಆಶ್ರಮದ ಸ್ಥಾಪನೆಗಾಗಿ ಹಲವು ಲಕ್ಷ ರೂಪಾಯಿಗಳನ್ನು ಕೊಡಿಸಿದರು. ಇದರಿಂದಾಗಿ ಆಶ್ರಮದ ಆವರಣದಲ್ಲಿ ಕೆಲವು ಚಿಕ್ಕ ಕಟ್ಟಡಗಳನ್ನು ಕಟ್ಟಲು ಸಾಧ್ಯವಾಯಿತು. ಸ್ವಾಮಿ ರಂಗನಾಥಾನಂದಜಿ ಅವರು ರಾಮಕೃಷ್ಣ ಮಿಷನ್ನಿನ ಅಧ್ಯಕ್ಷರಾಗಿದ್ದಾಗ, 2003 ನೇ ಇಸವಿಯಲ್ಲಿ, ಆಶ್ರಮವನ್ನು ರಾಮಕೃಷ್ಣ ಮಿಷನ್ನಿಗೆ ಸೇರಿಸಿಕೊಳ್ಳಲಾಯಿತು.

ಈಗ ಆಶ್ರಮದ ಚಟುವಟಿಕೆಗಳು ಬಹಳ ತೀವ್ರ ಗತಿಯಿಂದ ಬೆಳೆಯುತ್ತಿವೆ. ಆಶ್ರಮದ ದೇವಮಂದಿರವು ಬಹಳ ಚಿಕ್ಕದಾಗಿದೆ. ಸಾಧುಗಳು, ಬ್ರಹ್ಮಚಾರಿಗಳಿಗೆ ವಸತಿ ವ್ಯವಸ್ಥೆ ಸಮರ್ಪಕವಾಗಿಲ್ಲ. ಆಶ್ರಮವು ನಡೆಸುತ್ತಿರುವ ಉಚಿತ ಔಷಧಾಲಯದ ಮೊದಲನೆಯ ಮಹಡಿಯನ್ನು ಕಟ್ಟಬೇಕಾಗಿದೆ. ಹೀಗೆ ಆಶ್ರಮದ ಸೇವಾಕಾರ್ಯಗಳಿಗೆ ಹಲವು ಕಟ್ಟಡಗಳ ಆವಶ್ಯಕತೆ ಇದೆ. ಆದ್ದರಿಂದ, ಭಕ್ತರು ಮತ್ತು ಉದಾರ ದಾನಿಗಳನ್ನು, ಕೆಳಗಿನ ಯೋಜನೆಗಳಿಗೆ ಚೆಕ್ ಅಥವಾ ಡಿ.ಡಿ. ಮೂಲಕ, 'Ramakrishna Mission Ashrama, Chapra' - ಈ ಹೆಸರಿಗೆ ಸಂದಾಯವಾಗುವಂತೆ ದೇಣಿಗೆಗಳನ್ನು ಕಳಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ.

1. ಅಡುಗೆ ಮನೆ/ ಊಟದ ಮನೆ/ ಸಾಧು ನಿವಾಸಗಳನ್ನು ಒಳಗೊಂಡ 2600 ಚದರಡಿಗಳ ವಿಸ್ತೀರ್ಣದ ಎರಡು ಮಹಡಿಗಳ ಕಟ್ಟಡ ನಿರ್ಮಾಣ - 20 ಲಕ್ಷ ರೂಪಾಯಿಗಳ ಅಂದಾಜು
2. ಆಶ್ರಮದ ದೇವಮಂದಿರವನ್ನು ಮೊದಲನೆಯ ಮಹಡಿಗೆ ಸ್ಥಳಾಂತರಿಸುವುದು - 5 ಲಕ್ಷ ರೂಪಾಯಿಗಳ ಅಂದಾಜು
3. ಉಚಿತ ಔಷಧಾಲಯದ ಮೊದಲ ಮಹಡಿಯ ನಿರ್ಮಾಣ - 20 ಲಕ್ಷ ರೂಪಾಯಿಗಳ ಅಂದಾಜು

**ಎಲ್ಲ ದೇಣಿಗೆಗಳಿಗೂ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯಿತಿ ಇದೆ.**

ಭಗವತ್ಸೇವೆಯಲ್ಲಿ ನಿಮ್ಮವ

ಸ್ವಾಮಿ ಅಸೀಮಾತ್ಮಾನಂದ
***ಕಾರ್ಯದರ್ಶಿ***